ವಾರಕ್ಕೆ ಸಾವಿರಗಟ್ಟಲೆ ಸಂಪಾದಿಸ್ತಾಳೆ. ಇವಳು ಒಂಥರ ಮಣ್ಣಿನ ಮಗಳು... ಅಲ್ಲಲ್ಲ, ಹುವ್ವಿನ ಮಗಳು. ಇವಳ ತಾಯಿ ಥರ'' ಅಂತ ಅವಳತ್ತ ಲಗುಬಗೆಯಿಂದ ನಕ್ಕ. ಆದರೆ ಅವಳು ನಗಲಿಲ್ಲ.

ಗೌರಿ ತನಗೆ ಕಪಾಳಕ್ಕೆ ಹೊಡೆದ ಮೇಲೆ ಎರಡ್ಮೂರು ದಿನ ಮಾತಾಡದೆ ಒಬ್ಬಂಟಿಯಾಗಿದ್ದಳು. ಅದೇನು ಅಳುಕೊ ಪಶ್ಚಾತ್ತಾಪವೊ ಆ ಮೌನ ಅರ್ಥವಾಗಿರಲಿಲ್ಲ. ಸಿಟ್ಟು, ಅವಮಾನದಿಂದ ಗುರ್ ಅನ್ನುತ್ತಿದ್ದ ನಾನೇ ಮೂರನೆಯ ದಿನಕ್ಕೆ ಮೆತ್ತಗಾಗಿಬಿಟ್ಟೆ. ಗೌರಿ ಪದ್ಯ ಓದದ ತರಗತಿ, ಅವಳಿಲ್ಲದ ಆಟ, ಅವಳಿಲ್ಲದ ನೇರಳೆ ಹಣ್ಣಿನ ತೋಪು, ಅವಳಿಲ್ಲದ ಕೆರೆ ಹಡ್ಡಲಿನ ಜಿಗಿದಾಟ ಸಪ್ಪೆ ಅನಿಸಿಬಿಟ್ಟಿತ್ತು. ಕೊನೆಗೆ ನಾನೇ ಮಾತನಾಡಿಸಿ ನವಿಲುಗರಿಯನ್ನು ಕೈಗಿಟ್ಟೆ. ಆ ಕ್ಷಣ, ಗೌರಿಯಲ್ಲಿ ಅದೆಂಥಾ ಹೊಳಪು! ಮೂರು ದಿನದಿಂದ ಮಡುಗಟ್ಟಿದ್ದ ದುಗುಡದ ಮೌನ ಒಮ್ಮೆಗೇ ಸಿಡಿದಂತಾಯಿತು. ಅವತ್ತು ಅವಳ ಕಣ್ಣಲ್ಲಿ ಹೊಮ್ಮಿದ ಹೊಳಪು; ಮರಿಕೋಳಿ ಗರಿಗೆದರಿದಂತೆ ಅರಳಿದ ಮುಖ!!...

ಆ ಚಿತ್ರ ಸ್ಫುಟವಾಗಿ ನನ್ನ ಕಣ್ಣ ಮುಂದೆ ಬಂತು. ಬಂದುದು ಚಳಿಗೊಡ್ಡಿದ ಕಾವಿನಂತೆ ಆವರಿಸಿಕೊಳ್ಳುತ್ತಿರುವಂತೆ ಭಾಸವಾಯಿತು. ಮಳೆಯ ಸೂಚನೆ ಹಿಡಿದು ನೆಲಗೂಡಿನಿಂದ ಪಿತಪಿತನೆ ಹೊರಬರುವ ಮಿಡಿತೆಗಳಂತೆ ಗೌರಿ ಗರಿಗೆದರತೊಡಗಿದಳು. ಅಂದುಕೊಂಡೆ: 'ಗೌರಿ ಇಷ್ಟು ವರ್ಷ ಕಾಲ ಯಾಕೆ ಸುಳಿಯದಿದ್ದೆ?'

ಪೂರ್ಣಾನಂದ ಇತ್ತ ತಿರುಗಿ, ''ಯಾಕೆ ಅಂಕಲ್, ಏನೊ ಯೋಚಿಸುತ್ತಿದ್ದೀರಿ? ಎಳನೀರು ತಕೊಳ್ಳಿ. ಅಂಜಲಿ ನೀನೂ ತಕೊ. ಖುಷಿ ಖುಷಿಯಾಗಿದ್ದ ಅಂಕಲ್ಗೆ ನೆನಪನ್ನೆಲ್ಲ ಕೆದಕಿ ಯೋಚನ್ಗೆ ತಳ್ಳಿದೆ ನೀನು'' ಅಂತ ನಕ್ಕ.

''ಹೇ ಶಿವರಾಜ, ಯೋಚನೆ ಯಾಕೆ? ಎಲ್ಲ ಸಂಬಂಧನೂ ಬಿಟ್ಹೋನಿಗೆ ಯೋಚನೆ ಮಾಡೋದೇನಿದೆ? ನೋಡು, ಈಗ ಗಾಳಿಬೀಸೀ ಬಂದಿದ್ದಿ. ನಿನ್ನ ಕಚೇರಿ ಜಂಜಾಟನ್ನೆಲ್ಲ ಮರೆತು ಎರಡುದಿನ ಹಾಯಾಗಿರು. ಹಿಂದೆ ಓದುವಾಗ ಇರುತ್ತಿದ್ದಲ್ಲ ಹಂಗೇ!'' – ಹಿಂದೆ ನಿಂತಿದ್ದ ಆನಂದರಾಜು ನಗುತ್ತಾ ಹೇಳಿದ. ಪೂರ್ಣಾನಂದ, ''ಅಪ್ಪ ನಾನು ಸುಮ್ನೆ ಹಂಗಂದೆ. ಈಗ ಅಂಕಲ್ ಎಷ್ಟು ಫ್ರೀಯಾಗಿದ್ದಾರೆ ಗೊತ್ತಾ?'' ಅಂದ. ಆನಂದರಾಜು, ''ಓಹೋ, ಹಂಗಾದ್ರೆ ಹಿಂದಿನ ಶಿವರಾಜನ್ನ ನೋಡಿದಂಗಾಯ್ತು ಅನ್ನಪ್ಪ. ಸರಿ, ಸರಿ. ಸಂತೆಯಿಂದ ಬಂದು ನಾನು ಮನೆ ಹತ್ರ ಕಾಯ್ತಿದ್ರೆ ನೀವು ಇಲ್ಗೆ ಬಂದಿದ್ದೀರಿ. ನಾಳೆ ನಿಧಾನ್ಕೆ ಬರಬೌದಿತ್ತಲ್ಲೊ ಪೂರ್ಣ ಜಾತ್ರೆಗಂಟ ಗೆಳೆಯ ಇಲ್ಲೇ ಇರ್ತಾನೆ'' ಅಂದ.

ಈಗ ಅಂಜಲಿ ಲಗುಬಗೆಯಿಂದ, ''ಹೌದಾ ಅಂಕಲ್. ಹಂಗಾದ್ರೆ ನಮ್ಮನೆಗೆ ನೀವು ಬರ್ಲೇಬೇಕು. ನಮ್ದು ಬಡವರ ಹಟ್ಟಿ. ಆದ್ರು ನೀವು ಜ್ವತೆಯಾಗಿ ಆಡಿದ ಗೆಳತಿ ಗೂಡು ಅದು. ಅಕ್ಕರೆಗೇನು ಕೊರತೆಯಿಲ್ಲ. ಹೌದಲ್ವಾ ಆನಂದರಾಜಪ್ಪ'' ಅನ್ನುತ ಥೇಟ್ ಆ ಗೌರಿ ಥರನೇ ಗಲ್ಲದ ಗುಳಿಯಲ್ಲಿ ನಗು ಚಿಮ್ಮಿಸಿ ನಮ್ಮಿಬ್ಬರ ಮುಖ ನೋಡಿದಳು. ಆ ನೋಟವೇ ಅಂತಃಕರಣದ ತೊರೆಯಲ್ಲಿ ಮೀಯಿಸುತ್ತಿದ್ದಾಳೆ ಅನಿಸಿತು.

ಆನಂದರಾಜು ಅವಳತ್ತ ತಿರುಗಿ, ''ಗೌರಿಗೆ ಇವಳೊಬ್ಬಳೇ ಮಗಳು. ಇವಳು ಒಂದು ವರ್ಷದ ಮಗುವಿದ್ದಾಗಲೇ ಇವಳಪ್ಪ ಹಾವು ಕಚ್ಚಿ ಹೋಗಿಬಿಟ್ಟ. ಪಾಪ ಗೌರಿ ಕಣ್ಣೀರಿಗೆ ಬಿದ್ದುಬಿಟ್ಟಳು. ಕಷ್ಟಪಟ್ಟಳು. ಬೆಂಕಿಕೆಂಡದಂಥ ಸಂಕಟಾನೆಲ್ಲ ಸೆರಿಗಿಗೆ ಕಟ್ಕೊಂಡು ವಹಿವಾಟು ನಿಲ್ಲಿಸಿದಳು. ಮಗಳ್ನೂ ಎಸ್‌ಎಸ್‌ಎಲ್‌ಸಿ ಗಂಟ ಓದಿಸಿದ್ಲು. ಇವಳಂತು ಅವ್ವನ ಮೀರಿಸೊ ಮಗಳು. ನಾನು ಬೆಂಗಳೂರ್ಗೆ ಹೋಗಿ ಬಂದಾಗೆಲ್ಲ ಇವಳು 'ಅವ್ವ ಹೇಳ್ತಿದ್ದ ಆ ಅಂಕಲ್ ಸಿಕ್ಕದ್ರಾ' ಅಂತ ಕೇಳ್ತಿದ್ದಳು. ಗೌರಿನೂ ಹಂಗೆನೇ: 'ಶಿವರಾಜ ಸಿಕ್ಕಿದ್ನಾ? ಊರಲ್ಲಿದ್ದ ಹೊಲ ಮನೇನೆಲ್ಲ ಅಣ್ಣನ್ಗೇ ಬಿಟ್ಟು ಹೋಗಿಬಿಟ್ನಂತೆ. ಮದ್ವೆನೂ ಆಗಲಿಲ್ವಂತೆ. ಹೆಂಗವನೆ? ನೀನು ಹೆಂಗಾದ್ರು ಮಾಡಿ ಅವನ ಕಂಡು ಒಂದ್ಮಾತು